ಮಾಡಿಸುತ್ತೇವೆ. ಗುಣಮಟ್ಟದ ಕಾಮಗಾರಿಯನ್ನು ಮಾಡುವ ಬಗ್ಗೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು.

ಶ್ರೀ ಜಗದೀಶ್ ಶೆಟ್ಟರ್ : ಒಂದು ಲಕ್ಷದವರೆಗೆ ಗುತ್ತಿಗೆಯನ್ನು ಕೊಡುವುದಕ್ಕೆ ಅವಕಾಶವಿರುವುದರಿಂದ ಇದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ರಸ್ತೆಯದರ ಬಗ್ಗೆ ತಿದ್ದುಪಡಿಯಾಗಿದೆ.

ಶ್ರೀ ಜಿ.ಡಿ.ನಾಯ್ಕ್ : ನಾನು ಎರಡು ಗಮನ ಸೆಳೆಯುವ ಸೂಚನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು : ನೀವು ಆಗ ಸದನದಲ್ಲಿರಲಿಲ್ಲ. ನಿಮ್ಮ ಹೆಸರನ್ನು ಎರಡೆರಡು ಸಲ ನಾನು ಕರೆದಿದ್ದೇನೆ.

ಶ್ರೀ ಜಿ.ಡಿ. ನಾಯ್ಕ್ : ಖಾಯಂ ಆಗಿ ಸೆಷನ್ ಅಟೆಂಡ್ ಮಾಡಿದ ವರಿಗೆ ಹೀಗೇ ಹೇಳಿದರೆ ಹೇಗೆ?

ಅಧ್ಯಕ್ಷರು : ಆಯಿತು, ತಾವು ಕೇಳಿ.

18) ವಿಷಯ : ಅಂಗನವಾಡಿ ಕಾರ್ಯಕರ್ತೆಯನ್ನು ನೇಮಕ ಮಾಡುವಾಗ ಸ್ಥಳೀಯ ರಹವಾಸಿ ಅಲ್ಲದವರನ್ನು ನೇಮಕ ಮಾಡಿರುವ ಬಗ್ಗೆ

ಶ್ರೀ ಜಿ.ಡಿ. ನಾಯ್ಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ಭಟ್ಕಳ ತಾಲ್ಲೂಕು ಹಿರೇದೋಮಿಗೆ ಅಂಗನವಾಡಿ ಕಾರ್ಯಕರ್ತೆಯನ್ನು ನೇಮಕ ಮಾಡಿಕೊಳ್ಳುವಾಗ ಸ್ಥಳೀಯ ರಹವಾಸಿಗಳ ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರದ ಕಾನೂನು ಇದ್ದರೂ ಕೂಡ ಸ್ಥಳೀಯ ರಹವಾಸಿ ಅಲ್ಲದ ಕುಮಾರಿ ಯಶೋಧಾ ವೆಂಕಟರಮಣ ನಾಯ್ಕ್ ಇವರನ್ನು ಆಯ್ಕೆ ಮಾಡಿದ್ದು ಇದನ್ನು ರದ್ದುಪಡಿಸಿ ಶ್ರೀಮತಿ ಮಾದೇವ ನಾಯ್ಕ್ ಅರ್ಜಿದಾರರನ್ನು ಆಯ್ಕೆ ಮಾಡಿ ಆದೇಶಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರನ್ನು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತಿದೆ.

ಭಟ್ಕಳ ತಾಲ್ಲೂಕಿನ ಹಿರೇದೋಮಿ–3 ಅಂಗನವಾಡಿ ಕೇಂದ್ರಕ್ಕೆ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲು ದಿನಾಂಕ: 14.12.2011 ರಂದು ಸಮಿತಿ ಸಭೆ ಸೇರಿ ಕಾಯಕರ್ತೆ ಹುದ್ದೆಗೆ ಬಂದ 2 ಅರ್ಜಿಗಳನ್ನು ನಿಯಮಾವಳಿಗಳ ಪ್ರಕಾರ ಪರಿಶೀಲಿಸಲಾಗಿರುತ್ತದೆ. ಮಾರ್ಗ ಸೂಚಿಯ ಪ್ರಕಾರ ಸ್ಥಳೀಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಾಗಿದ್ದು, ತಹಶೀಲ್ದಾರರು ನೀಡಿರುವ ವಾಸ್ತವ್ಯ ಪ್ರಮಾಣ ಪತ್ರದಲ್ಲಿ ಶ್ರೀಮತಿ ಯಶೋಧಾ ವೆಂಕಟರಮಣ ನಾಯ್ಕ ಹಿರೆದುಮ್ಮಿ ಇವರು ಸ್ಥಳೀಯರೆಂದು ಪ್ರಮಾಣಿಸಿದ್ದು, ಮೆರಿಟ ಆಧಾರದ ಮೇಲೆ ಸದರಿಯವರನ್ನು ಆಯ್ಕೆ ಸಮಿತಿಯು ಅಂಗನವಾಡಿ ಕಾರ್ಯಕರ್ತೆಯೆಂದು ಆಯ್ಕೆ ಮಾಡಲಾಗಿದೆ.

ಶ್ರೀ ಜಿ.ಡಿ. ನಾಯ್ಕ್ : ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಾರ್ಯ ಕರ್ತೆಯರನ್ನು ನೇಮಕ ಮಾಡುವಾಗ ಒಂದು ಅವರು ಖಾಯಂ ನಿವಾಸಿಯಾಗಿರಬೇಕು. ಎಸ್ಎಸ್ಎಲ್ಸಿಯಲ್ಲಿ ಪಾಸಾಗಿರಬೇಕು. ಅವರನ್ನು ಆಯ್ಕೆ ಮಾಡುವಾಗ ಅಲ್ಲಿಯ ಊರಿನ ರಹವಾಸಿಗಳನ್ನು ಆಯ್ಕೆ ಮಾಡಿರುವುದಿಲ್ಲ. ಆ ಊರಿನವರನ್ನು ಬಿಟ್ಟು ಬೇರೆ ಊರಿನವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದು ನಿಯಮಬಾಹಿರವಾಗಿದೆ. ದಯಮಾಡಿ ಅವರ ಎರಡನೇ ಅರ್ಜಿಯನ್ನು ರದ್ದು ಮಾಡಬೇಕು. ಶ್ರೀಮತಿ ಮಾದೇವನಾಯ್ಕ ರವರ ಆಯ್ಕೆ ಮಾಡುವುದು ಸರಿ ಇದೆ. ಅವರು ಅದೇ ಊರಿನವರಾಗಿದ್ದು ಆ ವಾರ್ಡಿನವರಾಗಿದ್ದಾರೆ. ಅವರನ್ನು ಆಯ್ಕೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಮಟ್ಟದ ಉಪನಿರ್ದೇಶಕರ ಮಟ್ಟದಲ್ಲಿ ಒಂದು ಆಯ್ಕೆ ಸಮಿತಿಯನ್ನು ನಾವು ಮಾಡಿದ್ದೇವೆ. ನಾವು ಆ ಆಯ್ಕೆ ಸಮಿತಿಯ ಮೂಲಕ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡುವುದಕ್ಕೆ ಡಿಸೆಂಬರ್ 14ನೇ ತಾರೀಖು ಸಂದರ್ಶನ ಆಗಿದೆ. ಅಲ್ಲಿಗೆ ಎರಡು ಅರ್ಜಿಗಳು ಬಂದಿದೆ. ಆ ಎರಡು ಅರ್ಜಿಯ ಪ್ರಕಾರ ಸ್ಥಳೀಯ ಅಭ್ಯರ್ಥಿಯನ್ನು ನಾವು ಆಯ್ಕೆ ಮಾಡಬೇಕು. ಅಲ್ಲಿಯ ಸ್ಥಳೀಯ ಅಭ್ಯರ್ಥಿ ಯಶೋಧಾ ವೆಂಕಟರಮಣ ನಾಯ್ಕ ಆಗಿದ್ದಾರೆ. ಅದಕ್ಕೋಸ್ಕರ ನಾವು ಅವರನ್ನು ಆಯ್ಕೆ ಮಾಡಿದ್ದೇವೆ. ಇದರಲ್ಲಿ ಯಾವುದೇ ರೀತಿಯಾದಂತಹ ಬೇರೆ ಉದ್ದೇಶವಿಲ್ಲ.

ಅಧ್ಯಕ್ಷರು : ಆಯಿತು.

ಶ್ರೀ ಜಿ.ಡಿ. ನಾಯ್ಕ್ : ಅವರು ಸ್ಥಳೀಯ ಅಭ್ಯರ್ಥಿ ಅಲ್ಲಿ. ತಾವು ಈ ಬಗ್ಗೆ ತನಿಖೆಯನ್ನು ಮಾಡಿ.

ಅಧ್ಯಕ್ಷರು : ಆಯಿತು. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ.ಡಿ. ನಾಯ್ಕ್ : ಈ ಬಗ್ಗೆ ತಾವು ಒಂದು ಉತ್ತರವನ್ನು ಕಳುಹಿಸಿಕೊಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರಿಗೆ ಒಂದು ಉತ್ತರದ ಪ್ರತಿಯನ್ನು ಕಳುಹಿಸಿಕೊಡಿ. ಮಾನ್ಯ ಸೈಯದ್ ಯಾಸೀನ್‌ರವರೆ ತಾವು ಗಮನವನ್ನು ಸೆಳೆಯಿರಿ.

19) ವಿಷಯ: ತಾಂತ್ರಿಕ ಕಾಲೇಜನ್ನು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ವಿಟಿಯುಗೆ ವರ್ಗಾಯಿಸಿರುವ ಬಗ್ಗೆ

ಶ್ರೀ ಸೈಯದ್ ಯಾಸೀನ್ : ಮಾನ್ಯ ಅಧ್ಯಕ್ಷರೆ, ರಾಯಚೂರು, ಗಂಗಾವತಿ, ಹೂವಿನ ಹಡಗಲಿ, ಓಗಿನಹಳ್ಳಿ ಮತ್ತು ಕಾರವಾರದ ಸರ್ಕಾರಿ ತಾಂತ್ರಿಕ ಕಾಲೇಜನ್ನು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ವಿಶ್ವೇಶ್ವರಯ್ಯ ತಾಂತ್ರಕ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ) : ಸರ್ಕಾರವು 2007–08 ಮತ್ತು 2008–09ನೇ ಸಾಲಿನಲ್ಲಿ 10 ನೂತನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಬೆಂಗಳೂರು, ರಾಮನಗರ, ಚಾಮರಾಜನಗರ, ಕೆ.ಆರ್.ಪೇಟೆ, ಕುಶಾಲನಗರ, ಹಾಸನ, ಹೂವಿನಹಡಗಲಿ, ಹಾವೇರಿ, ರಾಯಚೂರು ಮತ್ತು ಕಾರವಾರದಲ್ಲಿ ಪ್ರಾರಂಭಿಸಲಾಯಿತು. ಗಂಗಾವತಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು 2012–13ನೇ ಸಾಲಿನಿಂದ ಪ್ರಾರಂಭಿಸಲು ತೀರ್ಮಾನಿಸಿದ್ದು ಇದಕ್ಕೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದೆ. ಗಂಗಾವತಿ, ಹೂವಿನಹಡಗಲಿ, ರಾಯಚೂರು ಮತ್ತು ಕಾರವಾರ ಇವುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಕಾಲೇಜುಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ ಮತ್ತು ಈ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಿ ಜಮೀನನ್ನು ಸಹ ಈಗಾಗಲೇ ಮಂಜೂರು ಮಾಡಲಾಗಿದೆ. ಕಳೆದ ಮೂರು ವರ್ಷಗಳಿಂದ ರಾಯಚೂರು, ಹೂವಿನಹಡಗಲಿ ಮತ್ತು ಕಾರವಾರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ತಾತ್ಕಾಲಿಕವಾಗಿ